ದಿನಾಂಕ ಃ 24.02.2022 ಓ.ಎಸ್ ನಂ.64/2021 ರಲ್ಲಿ
ಪಿ.ಡಬ್ಲ್ಯೂ-1(ಶ್ರೀಧರ್)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ಶ್ರೀ ಎಂ.ಎಂ ವಕೀಲರಿಂದಃ

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ 20.10.2008 ರ ಕ್ರಯಪತ್ರದ ದೃಢೀಕೃತ ನಕಲನ್ನು ನಿಪಿ-1 ಎಂದು, ದಿನಾಂಕ 24.11.2009 ರ ಕ್ರಯಪತ್ರದ ದೃಢೀಕೃತ ನಕಲನ್ನು ನಿಪಿ-2 ಎಂದು, ದಿನಾಂಕ 24.11.2009 ರ ಕ್ರಯಪತ್ರದ ದೃಢೀಕೃತ ನಕಲನ್ನು ನಿಪಿ-3 ಎಂದು, ದಿನಾಂಕ 13.11.2020 ರ ದಾನಪತ್ರದ ದೃಢೀಕೃತ ನಕಲನ್ನು ನಿಪಿ-4 ಎಂದು, ದಿನಾಂಕ 22.01.2021 ರಂದು ರಾಮನಗರ ತಹಶೀಲ್ದಾರ್‌ರವರಿಗೆ ಕೊಟ್ಟ ಅರ್ಜಿಯ ನಕಲನ್ನು ನಿಪಿ-5 ಎಂದು, ದಿನಾಂಕ 29.01.2021 ರಂದು ಬಿಡದಿ ಪುರಸಭೆಗೆ ಕೊಟ್ಟಂತಹ ಅರ್ಜಿಯ ಪ್ರತಿಯನ್ನು ನಿಪಿ-6 ಎಂದು, ದಿನಾಂಕ 22.07.1989 ರ ಮರಣ ಶಾಸನದ ದೃಢೀಕೃತ ನಕಲನ್ನು ನಿಪಿ-7 ಎಂದು, ದಿನಾಂಕ 20.10.2008 ರ ಕ್ರಯಪತ್ರದ ಡಿಜಿಟಲ್ ಪ್ರತಿಯನ್ನು ನಿಪಿ-8 ಎಂದು, ದಿನಾಂಕ 24.11.2009 ರ ಕ್ರಯಪತ್ರದ ಡಿಜಿಟಲ್ ಪ್ರತಿಯನ್ನು ನಿಪಿ-9 ಎಂದು, ದಿನಾಂಕ 24.11.2009 ರ ಕ್ರಯಪತ್ರದ ಡಿಜಿಟಲ್ ಪ್ರತಿಯನ್ನು ನಿಪಿ-10 ಎಂದು, 3 ಅಸ್ಸೆಸ್ಮೆಂಟ್ ಎಕ್ಸ್ಟ್ರ್ಯಾಕ್ಟ್ ನ ದೃಢೀಕೃತ ನಕಲುಗಳನ್ನು ನಿಪಿ-11 ರಿಂದ ನಿಪಿ-13 ಎಂದು, ದಿನಾಂಕ 13.11.2020 ರ ದಾನಪತ್ರದ ಡಿಜಿಟಲ್ ಪ್ರತಿಯನ್ನು ನಿಪಿ-14 ಎಂದು, ರೇಣುಕಾಂಭನವರ ಮರಣ ಪ್ರಮಾಣಪತ್ರವನ್ನು ನಿಪಿ-15 ಎಂದು, ಬಿಡದಿ ಪುರಸಭೆಯ ಅಧಿಕಾರಿಗಳಿಗೆ ಕಳುಹಿಸಿದ ನೋಟಿಸ್‌ನ ಪ್ರತಿಗಳನ್ನು

ನಿಪಿ-16 ಮತ್ತು ನಿಪಿ-17 ಎಂದು ಗುರುತಿಸಲಾಯಿತು. ವಾದಿ ಮತ್ತು ಅವರ ತಂದೆಯ ಆಧಾರ್ ಕಾರ್ಡ್‌ಗಳ ನಕಲುಗಳನ್ನು ಹಾಜರು ಮಾಡಲಾಗಿದೆ.

ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ರಾಮನಗರ.